Rotary 2025-26

# ಮಿಡ್‌ಟೌನ್ ನ್ಯೂಸ್
# Midtown News

R.I. DISTRICT 3182 Zone-10 Club No. 21853 Charter Date : 16-05-1984

In House Bulletin of Rotary Club Shimoga Mid Town

R.I. President : Rtn. Francesco Arezzo
Dist. Governor : Rtn. Palaksha K.
Asst. Governor : Rtn. K.P. Shetty

President : Rtn. Harsha Kamath
Secretary : Rtn. Manjunath R.N.

Director : Rtn. Anil P. Shetty
Editor : Rtn. Anand I.R.
Co-Chairmen : Rtn. Narendra K.V.
Members : Rtn. Sreenag, Rtn. Raghupathi S., Rtn. K.V.L. Raju

*We meet on 2nd, 3rd and 4th Thursday at Rotary Mid Town Hall, SHIVAMOGGA-577201* rotaryshimogamidtown@gmail.com

Vol. 42 26 - 2 - 2026 ISSUE 24

## Water and Sanitation Month

### ದಿನಾಂಕ 19-2-2026ರ ವಾರದ ಸಭೆಯ ವರದಿ

ದಿನಾಂಕ 19-2-2026ರ ವಾರದ ಸಭೆಯು ಉಪನ್ಯಾಸಕರ ಸಭೆಯಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷ ರೊ. ಹರ್ಷ ಬಿ. ಕಾಮತ್ ಇವರು ವಹಿಸಿದ್ದರು ಹಾಗೂ ಸಭೆಗೆ ಆಗಮಿಸಿದ್ದ ಎಲ್ಲಾ ರೋಟರಿ ಸದಸ್ಯರನ್ನು




ಆಹ್ವಾನಿಸಿದರು. ಮೊದಲಿಗೆ ರೊ. ಸ್ವರ್ಣಾ ಮುರಳಿ ಇವರು ರೋಟರಿ ಮಾಹಿತಿಯನ್ನು ಓದಿದರು.

ದಿನಾಂಕ 23-2-2026ರಂದು ಕಾಸ್ಮೋಕ್ಲಬ್‌ನಲ್ಲಿ ನಡೆಯಲಿರುವ ವಿಶ್ವ ಅರಿವಿನ ದಿನ ಕಾರ್ಯಕ್ರಮಕ್ಕೆ ಎಲ್ಲಾ ಸದಸ್ಯರು ಕುಟುಂಬ ಸಮೇತ ಪಾಲ್ಗೊಳ್ಳಬೇಕೆಂದು ಅಧ್ಯಕ್ಷರು ಮನವಿ ಮಾಡಿದರು.

ಅತಿಥಿ ಉಪನ್ಯಾಸಕರಾದ ಶ್ರೀಯುತ ಹೇಮಂತ್ ಎನ್., ಐಎಎಸ್, ಮುಖ್ಯ ಕಾರ್ಯ ನಿರ್ವಾಹಕರು, ಜಿಲ್ಲಾ ಪಂಚಾಯತ್, ಶಿವಮೊಗ್ಗ ಇವರು ತಮ್ಮ ಪರಿಚಯವನ್ನು ಅವರೇ ಮಾಡಿಕೊಂಡರು. ಉಪನ್ಯಾಸದಲ್ಲಿ ಮಾತನಾಡಿದ ಅವರು ಕ್ರಾಫ್ಟ್ ಆಫ್ ಮಲೆನಾಡು ಸಂಸ್ಥೆಯ ವಿವಿಧ ಕಾರ್ಯ ಚಟುವ



ಟಿಕೆಗಳನ್ನು ವಿವರಿಸಿದರು. ಮಲೆನಾಡಿನ ಸ್ಥಳೀಯ ಕೈಗಾರಿಕೆ ಮತ್ತು ಕೈ ಗುಡಿಗಾರಿಕೆಯಿಂದ ನಿರ್ಮಿತ ವಸ್ತುಗಳ ಪ್ರದರ್ಶನ, ಅವುಗಳ ಮೌಲ್ಯ ಹಾಗೂ ಗ್ರಾಮೀಣ ಆರ್ಥಿಕತೆಯ ಮೇಲಿನ ಪರಿಣಾಮವನ್ನು ರೋಟರಿ ಸದಸ್ಯರಿಗೆ ಮನದಟ್ಟುಗೊಳಿಸಿದರು.

ಇತ್ತೀಚೆಗೆ ನಡೆದ ಫಲ-ಪುಷ್ಪ ಪ್ರದರ್ಶನದಲ್ಲಿ ಈ ವೇದಿಕೆಯ ಮೂಲಕ ರೂ. 3 ಕೋಟಿಗೂ ಅಧಿಕ ವಹಿವಾಟು ನಡೆದಿರುವುದನ್ನು ಸ್ಮರಿಸಿದರು.

## ಹಿಂದೂಡಿದ ವಾರದ ಸಭೆ

ದಿನಾಂಕ : **23-02-2026, ಸೋಮವಾರ**

ಸಮಯ : **ಸಂಜೆ 7.00ಕ್ಕೆ** ಸ್ಥಳ : **ಕಾಸ್ಮೋಕ್ಲಬ್**

ಅತಿಥಿ : **ಶ್ರೀ ಓಂ ಗಣೇಶ್ ಉಪ್ಪುಂದ**

ನಟ ಮತ್ತು ವಾಗ್ಮಿ, ಉಪ್ಪುಂದ

ವಿಷಯ : **ವಿಶ್ವ ಅರಿವಿನ ದಿನ**

ಶಿವಮೊಗ್ಗ ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ವಿಶೇಷವಾಗಿ ಮಹಿಳೆಯರು ಕೈಗುಡಿಗಾರಿಕೆ ಚಟುವಟಿಕೆಗಳತ್ತ ಹೆಚ್ಚಾದ ಆಸಕ್ತಿ ತೋರಿಸುತ್ತಿರುವುದು ಸಂತೋಷದ ವಿಷಯ ಎಂದು ಅವರು ತಿಳಿಸಿದರು.

ಸ್ಥಳೀಯ ಉತ್ಪನ್ನಗಳಿಗೆ ಉತ್ತೇಜನ ನೀಡುವಲ್ಲಿ ಕ್ರಾಫ್ಟ್ ಆಫ್ ಮಲೆನಾ



ಡಿನ ಪಾತ್ರ ಮಹತ್ವದ್ದಾಗಿದೆ ಎಂದರು.

ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ ಸದಸ್ಯರು ಕೈ ಗುಡಿಗಾರಿಕೆ ವಸ್ತುಗಳು ಹೆಚ್ಚಾಗಿ ಎಲ್ಲೆಲ್ಲಿ ತಯಾರಿಸಲಾಗುವುದು ಎಂಬ ಪ್ರಶ್ನೆಗೆ ಶಿವಮೊಗ್ಗ ಜಿಲ್ಲೆಯ ಅನೇಕ ಗ್ರಾಮಗಳಲ್ಲಿ ಇದನ್ನು ತಯಾರಿಸಲಾಗುವುದು ಎಂದು ಮಾಹಿತಿ ನೀಡಿದರು.

ನಂತರ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಸಮ್ಮುಖದಲ್ಲಿ ಅವರಿಗೆ ಗೌರವ ಸಮರ್ಪಣೆಯನ್ನು ಮಾಡಲಾಯಿತು.




ಇಂದಿನ ಹಾಜರಾತಿ ಬಹುಮಾನಕ್ಕೆ ರೊ. ಮತ್ತು ರೊ. ಇವರುಗಳು ಭಾಜನರಾದರು. ಕೊನೆಯಲ್ಲಿ ಸಂಪ್ರದಾಯದಂತೆ ಕಾರ್ಯದರ್ಶಿಗಳ ವಂದನಾರ್ಪಣೆಯೊಂದಿಗೆ ಸಭೆಯು ಸಂಪನ್ನಗೊಂಡಿತು.




ದಿನಾಂಕ 23-2-2026 ರಂದು ಸಂಜೆ ಶಿವಮೊಗ್ಗ ಕಾಸ್ಮೋ ಕ್ಲಬ್‌ನಲ್ಲಿ ಶಿವಮೊಗ್ಗ ಮಲೆನಾಡು ರೋಟರಿ ಕ್ಲಬ್ ಆತಿಥ್ಯದಲ್ಲಿ ನಡೆದ ವಿಶ್ವ ಅರಿವಿನ ದಿನ (World Understanding Day) ಕಾರ್ಯಕ್ರಮ ಅತ್ಯಂತ ಅದ್ಭುತವಾಗಿ ನೆರವೇರಿತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ವಾಗ್ಮಿ ಹಾಗೂ ನಟರಾದ ಶ್ರೀ ಓಂ ಗಣೇಶ್ ಉಪ್ಪುಂದ ಅವರು ಅತ್ಯಂತ ಅರ್ಥಪೂರ್ಣ ಹಾಗೂ ಪ್ರೇರಣಾದಾಯಕ ಮಾತುಗಳ ಮೂಲಕ ಎಲ್ಲರ ಮನಸ್ಸನ್ನು ಗೆದ್ದರು. ಅವರ ಪ್ರತಿಯೊಂದು ಮಾತು ಕೂಡ ದಾರಿದೀಪವಾಗುವಂತಿತ್ತು. ಯಾವಾಗಲು ಎಲ್ಲರ ಮಧ್ಯ ಧನಾತ್ಮಕ ಚಿಂತನೆ ಇರಬೇಕು. ಒಳ್ಳೆಯದನ್ನೆ ಪಸರಿಸಬೇಕು. ಎಂಬ ಅವರ ಸಂದೇಶ ಹೃದಯ ಸ್ಪರ್ಶಿ ಎನ್ನಿಸುವಂತಿತ್ತು. ಅನೇಕ ಅಮೂಲ್ಯ ವಿಚಾರಗಳನ್ನು ಒಳಗೊಂಡ ಕೆಲವು ಮಹತ್ವದ ವಿಷಯಗಳನ್ನು ನಮ್ಮೊಂದಿಗೆ ಹಂಚಿಕೊಂಡು ಕಾರ್ಯಕ್ರಮವನ್ನು ಮತ್ತಷ್ಟು ಸಂಮೃದ್ಧಗೊಳಿಸಿದರು.










ದಿನಾಂಕ 1-3-2026ರಂದು ಡಯಾಬಿಟಿಕ್ ಸೆಲ್ಫ್‌ಕೇರ್ ಫೌಂಡೇಷನ್ ಹಾಗೂ ರೋಟರಿ ಕ್ಲಬ್ ಶಿವಮೊಗ್ಗ ಮಿಡ್‌ಟೌನ್ ಆಶ್ರಯದಲ್ಲಿ ನಡೆದ ಡಯಾಬಿಟಿಕ್ ಹಾಗೂ ಹೃದಯ ಸಂಬಂಧಿ ಕಾಯಿಲೆಗಳ ಆರೋಗ್ಯ ತಪಾಸಣಾ ಶಿಬಿರದ ಉದ್ಘಾಟನೆಯನ್ನು ಡಾ|| ಮಹೇಶ್ ಮೂರ್ತಿ, ಹೃದಯ ತಜ್ಞರು, ಶಿವಮೊಗ್ಗ ವೈದ್ಯಕೀಯ ವಿಜ್ಞಾನ ಕಾಲೇಜು ಅವರು ನೆರವೇರಿಸಿದರು. ತಮ್ಮ ಉಪನ್ಯಾಸದಲ್ಲಿ ಹೃದಯದ ಆರೋಗ್ಯಕ್ಕಾಗಿ ಪ್ರತಿಯೊಬ್ಬರ ಮಧುಮೇಹದ ತಪಾಸಣೆ ಕಡ್ಡಾಯವಾಗಿ ಮಾಡಿಸಿಕೊಳ್ಳುವುದು ಅಗತ್ಯ ಎಂದು ಹೇಳಿದರು. ಇಂದಿನ ದಿನಗಳಲ್ಲಿ ಹೃದಯ ಕಾವಲಿಗಾಗಿ ಮಧುಮೇಹ ಮತ್ತು ಹೃದ್ರೋಗ ಪರಸ್ಪರ ಸಂಬಂಧ ಹೊಂದಿರುವ ಗಂಭೀರ ಆರೋಗ್ಯ ಸಮಸ್ಯೆಗಳಾಗಿದ್ದು, ರಕ್ತದಲ್ಲಿನ ಸಕ್ಕರೆ ಮಟ್ಟದ ನಿಯಂತ್ರಣದ ಕೊರತೆ ಹೃದಯಕ್ಕೆ ಅಪಾಯವನ್ನು ಉಂಟುಮಾಡಬಹುದು ಎಂದರು. ಕಾರ್ಯಕ್ರಮದಲ್ಲಿ ಡಾ|| ಪ್ರವೀಣ್ ಕುಮಾರ್ ದೇವರ್‌ಬಾವಿ ಶಿಬಿರಾರ್ಥಿಗಳ ಆರೋಗ್ಯ ತಪಾಸಣೆ ನಡೆಸಿ ಸೂಕ್ತ ಸಲಹೆಗಳನ್ನು ನೀಡಿದರು. ಅಧ್ಯಕ್ಷರಾದ ರೊ. ಹರ್ಷ ಬಿ. ಕಾಮತ್‌ರವರು ಸ್ವಾಗತವನ್ನು ಮಾಡಿದರು.

## ROTARIAN BIRTHDAY *Greetings to*

| | |
|---|---|
| Rtn. Dr. Gowtham B.M. | Feb-21 |
| Rtn. Santhosh S.S. | Feb-24 |

## MARRIAGE ANNIVERSARY *Greetings to*

| | |
|---|---|
| Rtn. Santhosh S.S. | Feb-27 |
| Ann. Padmashree | |
| Rtn. Natraj G.G. | Feb-28 |
| Ann. Nethravathi | |
| Rtn. Raveendra Bennehalli | Feb-28 |
| Ann. Girija | |
| Rtn. Arjun D.M. | Feb-28 |
| Ann. Namitha K.S. | |

## ANN BIRTHDAY *Greetings to*

| | |
|---|---|
| Ann. Gowri C. Vijay Kumar | Feb-26 |

Printed at : A.S.R. Offset Printers, #4, Dargah Complex, Tilak Nagar Main Road, SHIMOGA-577201, Ph : 278764